ಆಶ್ವಾಸನೆ ಕೊಟ್ಟಿದ್ದರು. ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರು. ಆ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಪಿಚ್.ಎಂ. ರೇವಣ್ಣ : ಮಾನ್ಯ ಅಧ್ಯಕ್ಷರೇ, ಕೇಂದ್ರದಿಂದ ಮತ್ತು ನಮ್ಮಿಂದ ಎಷ್ಟು ಹಣ ಬಿಡುಗಡೆ ಮಾಡಿದ್ದೇವೆ ಅಂದರೆ ಅದು 520.317 ಲಕ್ಷ ರೂಪಾಯಿಗಳು ಬಿಡುಗಡೆ ಆಗಿದೆ. ಮಾನ್ಯ ಸದಸ್ಯರು ತಾಲ್ಲೂಕುವಾರು ಫಿಗರ್ಸ್ ಬೇಕು ಅಂದರೆ ಇದರಲ್ಲಿ ಮೂರು ಇಲಾಖೆಗಳು ಬರುತ್ತವೆ. ಕೃಷಿ, ತೋಟಗಾರಿಕೆ ಮತ್ತು ಅರಣ್ಯ ಇಲಾಖೆಗಳು. ಜಲಾನಯನ ಪ್ರದೇಶದಲ್ಲಿ ಅಂದರೆ ಆ ಭಾಗದಲ್ಲಿ ತುರುವೇಕೆರೆ ಮತ್ತು ಮೂವತ್ತೂರು. ಆ ಭಾಗದಲ್ಲಿ ಬೆಂಗಳೂರು ಮತ್ತು ತುಮಕೂರು ಎರಡೂ ಸೇರುವುದರಿಂದ ಫಿಗರ್ಸ್ ಕೊಡುವುದಕ್ಕಾಗುವುದಿಲ್ಲ ಎಂದು ನಾನು ತಿಳಿಸಿದ್ದೇನೆ. ಮತ್ತೆ ಅವರು ಏನು ಬಯಲು ಅಭಿವೃದ್ಧಿ ಮಾಡಲಿ ಬಗ್ಗೆ ಕೇಳಿದ್ದಾರೆ ಅದು ಈ ಶಾಸನ ಸಭೆಯಲ್ಲಿ ಬರುತ್ತದೆ. ಆ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಂಡಿದೆ.

ಅಧ್ಯಕ್ಷರು : ಪ್ರಶ್ನೋತ್ತರ ಮುಗಿಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, 25Ë8Ë94ರ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಒಂದನೇ ಪಟ್ಟಿಯಲ್ಲಿರುವ 19 ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ 302, 305, 172, 181 ಮತ್ತು 46 ಪ್ರಶ್ನೆಗಳನ್ನು ಹೊರತು ಪಡಿಸಿ ಉಳಿಸಿ 14 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಪಟ್ಟಿಯನ್ನು ಸಭೆಯು ಮುಂದೆ ಇಡುತ್ತೇನೆ.

ಗ್ರಾಮ ಸಹಕಾರಿ ಪತ್ತಿನ ಸಂಘಗಳಿಂದ ರೈತರಿಗೆ ಪುನಃ ಸಾಲ ದೊರಕಿಸುವ ಬಗ್ಗೆ

323- ಶ್ರೀ ಬಿ.ಆರ್. ಪಾಟೀಲ್ (ಗದಗ್) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾಲ ಮನ್ನಾ ಲಾಭ ಪಡೆದುಕೊಂಡ ರೈತರಿಗೆ ಗ್ರಾಮ ಸಹಕಾರಿ ಪತ್ತಿನ ಸಂಘಗಳಿಂದ ಸಾಲ ಸಿಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಪತ್ತಿನ ಸಹಕಾರ ಸಂಘಗಳಲ್ಲಿ ಸಾಲ ಸಿಗದೆ ಇಂತಹ ರೈತರು ಅನಿವಾರ್ಯವಾಗಿ ದೊಡ್ಡ ದರದಲ್ಲಿ ಖಾಸಗಿ ಮೂಲಗಳಿಂದ ತೆಗೆಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ವ್ಯವಸ್ಥೆಯಿಂದ ರೈತರನ್ನು ಬಿಡುಗಡೆ ಮಾಡಿದ ಪುನಃ ಸಹಕಾರಿ ಪತ್ತಿನ ಸಂಘದಿಂದ ಸಾಲ ಸಿಗುವ ವ್ಯವಸ್ಥೆ ಮಾಡಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಸಹಕಾರ ಸಚಿವರು) :

ಅ) ಬಂದಿದೆ (ಕೆಲವು ಪ್ರಕರಣಗಳಲ್ಲಿ ಮಾತ್ರ).

ಆ) ಬಂದಿಲ್ಲ.

ಇ) ಈ ಬಗ್ಗೆ ಸಂಬಂಧಿಸಿದ ಸಂಸ್ಥೆಗಳಿಗೆ ಆದೇಶ ನೀಡಲಾಗಿದ್ದಾಗ್ಯೂ ಸಾಲ ವಿತರಣೆಯು ಸಾಲ ವಸೂಲಾತಿಯನ್ನು ಅವಲಂಬಿಸಿರುತ್ತದೆ.

ರಾಜ್ಯದಲ್ಲಿ ಎ.ಪಿ.ಎಂ.ಸಿ. ಮಾರ್ಕೆಟ್ ಯಾರ್ಡ್‌ನಲ್ಲಿ ಶ್ರಮಿಕ ಭವನ

304 - ಶ್ರೀ ಶಿವಾನಂದ ಪಿಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?